(ಇ) ಸಕ್ರಮ ಮಾಡಿದ ಪ್ರಕರಣಗಳು ಹಾಗೂ ಅತಿಕ್ರಮಣವನ್ನು ತೆರವುಗೊಳಿಸಿ ಇಲಾಖೆಗೆ ಭೂಮಿಯನ್ನು ಹಿಂದಕ್ಕೆ ಪಡೆಯಲಾದ ವಿವರ ಈ ಕೆಳಗಿನಂತಿದೆ.

ಸಕ್ರಮಗೊಳಿಸಿದ ಪ್ರಕರಣ = 7156 4759.40 ಹೆ.

ತೆರವುಗೊಳಿಸಿದ ಪ್ರಕರಣ = 41511 42819.015 ಹೆ.

(ಈ) ಸರ್ಕಾರಿ ಆದೇಶ ಸಂಖ್ಯೆ: ಅಪಜೀ ಎಫ್‌ಜಿಎಲ್ 90 ರ ಪ್ರಕಾರ ಈವರೆಗೆ 7156 ಪ್ರಕರಣಗಳಿಗೆ 4, 759.40 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಕ್ರಮಗೊಳಿಸಲಾಗಿದೆ. 7,763 ಪ್ರಕರಣಗಳಿಗೆ 6,530.59 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಕ್ರಮಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

(ಉ) ದಿನಾಂಕ: 27–4–978ರ ಪೂರ್ವದ ಅರಣ್ಯ ಒತ್ತುವರಿ ಪ್ರಕರಣಗಳನ್ನು ಕೇಂದ್ರ ಸರ್ಕಾರ ನೀಡಿರುವ ಅನುಮೋದನೆ ಮೇರೆಗೆ ಸಕ್ರಮಗೊಳಿಸಲಾಗುತ್ತಿದೆ. ದಿನಾಂಕ: 24–10–1980ರ ವರೆಗಿನ ಒತ್ತುವರಿ ಪ್ರಕರಣಗಳಲ್ಲಿ ಸಕ್ರಮಗೊಳಿಸಲು ಗ್ರಾಮ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗಿದ್ದು, ಸದರಿ ಸಮಿತಿಗಳ ಅಂತಿಮ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಒತ್ತುವರಿ ಪ್ರದೇಶವನ್ನು ಸ್ವಾಧೀನಕ್ಕೆ ಪಡೆಯಲು ಕರ್ನಾಟಕ ಅರಣ್ಯ ಕಾಯ್ದೆ 1963 64(ಎ)ರ ಪ್ರಕಾರ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

842. ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ಸಮೀಪದ ಚಾಮಲಾಪುರದಲ್ಲಿ ಸ್ಥಾಪಿಸಲುದ್ದೇಶಿಸಿರುವ ಕಲ್ಲಿದ್ದಲು ವಿದ್ಯುತ್ ಸ್ಥಾವರ ಸ್ಥಾಪನೆ ಸಂಬಂಧದಲ್ಲಿ ಕೆ.ಐ.ಎ.ಡಿ.ಬಿ.ಗೆ ಭೂ ಸ್ವಾಧೀನಕ್ಕೆ ಸರ್ಕಾರ ಸೂಚನೆ ನೀಡಿದೆಯೇ;

(ಆ) ನೀಡಿದ್ದಲ್ಲಿ, ಯಾವಾಗ ಸೂಚನೆ ನೀಡಲಾಗಿದೆ; ಎಷ್ಟು ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲು ಸೂಚಿಸಿದೆ; ಸೂಚನೆ ನಂತರ ಕೆ.ಐ.ಎ.ಡಿ.ಬಿ. ಯಾವ ಕ್ರಮವಹಿಸಿದೆ; ಸದ್ಯದ ಸ್ಥಿತಿಗತಿಗಳೇನು;

(ಇ) ಈ ಯೋಜನೆಯು ಜೀವರಾಶಿ ಹಾಗೂ ಪರಿಸರ ನಾಶ ಯೋಜನೆಯಾಗಿದ್ದು ನಾಗರೀಕರಿಗೆ ಗಂಭೀರವಾದ ತೊಂದರೆ ಉಂಟು ಮಾಡುವ ಈ ಯೋಜನೆಯನ್ನು ಸರ್ಕಾರ ಕೈಬಿಡಬೇಕೆಂಬ ನಾಗರೀಕರ ಆಗ್ರಹದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

(ಅ) ರಾಜ್ಯ ಸರ್ಕಾರದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಯಾವುದೇ ಸೂಚನೆ ನೀಡಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ.

(ಇ) ಪ್ರಸ್ತುತ ಸರ್ಕಾರದ ನಿಲುವಿನ ಪ್ರಶ್ನೆ ಉದ್ಭವಿಸುವುದಿಲ್ಲ.

419. ಶ್ರೀ ಗಡ್ಡ ದೇವರಮಕ್ ಗಡ್ಡಯ್ಯ ಶಿವದೂರ್ತಯ್ಯ :- ಮಾನ್ಯ ಉಪ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಶಿರಹಟ್ಟಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 2005 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಕೆರೆ ಹೂಳೆತ್ತುವುದು ಕಾಲುವೆ ದುರಸ್ಥಿ (ವಿವರ ನೀಡುವುದು);

(ಆ) ಶಿರಹಟ್ಟಿ ಮತ ಕ್ಷೇತ್ರದ ವ್ಯಾಪ್ತಿಯ ಸಾವನೂರ ತಾಲ್ಲೂಕಿನ ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಯಿತು;

(ಇ) ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ ಸ್ಥಗಿತಗೊಂಡ ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಉ) ಇಲ್ಲಿಯವರೆಗೆ ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿಗಾಗಿ ಎಷ್ಟು ಹಣ ವಿನಿಯೋಗಿಸಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

(ಅ) ಶಿರಹಟ್ಟಿ ಮತಕ್ಷೇತ್ರ ವ್ಯಾಪ್ತಿಯಲ್ಲಿ 2005 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಕೆರೆ ನಿರ್ಮಾಣ, ಕೆರೆ ಸುಧಾರಣೆ ಹಾಗೂ ಬ್ಯಾರೇಜ್ ನಿರ್ಮಾಣ, ಒಟ್ಟಾರೆ 5 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ.

(ಆ) ಅಕ್ಟೋಬರ್-2006 ರಲ್ಲಿ ಪ್ರಾರಂಭ ಮಾಡಲಾಗಿದೆ.